ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

## ವಿಧಾನಸಭೆ ವಿಶೇಷ ಅಧಿವೇಶನ ಕರೆದು ಪರ್ಯಾಯ ಕಾಯ್ದೆ ಅಂಗೀಕಾರ ಸಾಧ್ಯತೆ

# ಕೃಷಿ ಕಾಯ್ದೆ ಜಾರಿ ತಡೆಗೆ ಕೈ ಹೊಸ ತಂತ್ರ

ವಿ. ವಾ. 5-10-2020

**ನ ವೆಹಲಿ:** ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ತಿದ್ದುಪಡಿ ಕಾ ಯ್ದೆಗಳ ಅನುಷ್ಠಾನ ತಡೆಯಲು ಕಾಂಗ್ರೆಸ್ ಆಡಳಿತದ ರಾಜ್ಯಗಳು ವಿಧಾನಸಭೆಯ ವಿಶೇಷ ಅಧಿವೇಶನ ಕರೆಯುವ ನಿರೀಕ್ಷೆಯಿದೆ. ಕೇಂದ್ರದ ಕಾನೂನುಗಳನ್ನು ನಿಷ್ಕ್ರಿಯಗೊಳಿಸಲು ಕಾಂಗ್ರೆಸ್ ಆಡಳಿತದ ರಾಜ್ಯಗಳು ಪರ್ಯಾಯ ಕಾನೂನು ರೂಪಿಸಬೇಕೆಂದು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಇತ್ತೀಚೆಗೆ ಕರೆ ನೀಡಿದ್ದರು. ಮಾದರಿ ಕರಡನ್ನು ಸಿದ್ಧಪಡಿಸಿ ಈಗಾಗಲೇ ರಾಜ್ಯಗಳಿಗೆ ಕಳಿಸಲಾಗಿದೆ.

**» ರಾಜ್ಯಗಳಿಗೆ ಂಗ್ರೆಸ್ ಧ್ಯಕ್ಷೆ ೂಚನೆ**

ಇತ ಪ್ರತಿಪಕ್ಷಗಳ ರಾಜ್ಯಗಳಿಗೂ ಇದನ್ನು ನೀಡುವುದಾಗಿ ಕಾಂಗ್ರೆಸ್ ಹೇಳಿದೆ.

**ಕರ ನಲ್ಲಿ ಏನಿದೆ?:** ಕೇಂದ್ರದ ಕಾನೂನುಗಳನ್ನು ಅನುಷ್ಠಾನಗೊಳಿಸುವ ದಿ ಂಕವನ್ನು ರಾಜ್ಯ ಸರ್ಕಾರ ನಿರ್ಧರಿಸಬಹುದು ಎನ್ನುವುದು ಮೊದಲ ಅಂ . ರೈತ ಮತ್ತು ಯಾವುದೇ ಕಂಪನಿ ನಡುವಿನ ಗುತ್ತಿಗೆ ಕೃಷಿ, ಕನಿಷ್ಠ ಬೆಂಬಲ ಬೆ (ಎಂಎಸ್‌ಪಿ)ಗಿಂತ ಕಡಿಮೆ ಇರದಂತೆ ಖಾತರಿಪಡಿಸುವುದು ಎರಡನೇ ಅಂ ವಾಗಿದೆ. ಇತರ ಪಕ್ಷಗಳೊಂದಿಗೆ ಕಾಂಗ್ರೆಸ್ ಆಡಳಿತ ನಡೆಸುತ್ತಿರುವ ಮ ರಾಷ್ಟ್ರ ಮತ್ತು ಜಾರ್ಖಂಡ್‌ನಂಥ ರಾಜ್ಯಗಳಲ್ಲಿ ವಿಶೇಷ ಅಧಿವೇಶನಗಳು ನಡೆ ಯಲಿವೆಯೇ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಕೇರಳ, ಪಶ್ಚಿಮ ಬಂಗಾಳ ಮೊ ಲಾದ ಕಾಂಗ್ರೆಸೇತರ, ಬಿಜೆಪಿಯೇತರ ಸರ್ಕಾರಗಳಿರುವ ರಾಜ್ಯಗಳು ಕೂ ಏನು ಮಾಡಬಹುದು ಎಂಬ ಬಗ್ಗೆ ಸ್ಪಷ್ಟ ಚಿತ್ರಣ ಲಭ್ಯವಿಲ್ಲ. ರಾ ಗಳು ಅಂಗೀಕರಿಸುವ ಮಸೂದೆಗಳಿಗೆ ರಾಷ್ಟ್ರಪತಿ ಅಂಗೀಕಾರ ಪಡೆ ಯಬೇಕಾಗುತ್ತದೆ. ಸಹಿ ಹಾಕಲು ರಾಷ್ಟ್ರಪತಿ ನಿರಾಕರಿಸಬಹುದು.



ಟ್ರ್ಯಾಕ್ಟರ್ ರ್‍ಯಾಲಿಯಲ್ಲಿ ರಾಹುಲ್ ಗಾಂಧಿ, ಸಿಎಂ ಅಮರಿಂದರ್ ಸಿಂಗ್ ಇನ್ನಿತರರು.

### ಮಧ್ಯವರ್ತಿಗಳ ಮಧ್ಯವರ್ತಿಗಳು!

ಹೊಸ ಕೃಷಿ ಕಾನೂನುಗಳನ್ನು ವಿರೋಧಿಸುತ್ತಿರುವವರು 'ಮಧ್ಯವರ್ತಿಗಳ ಮಧ್ಯವರ್ತಿಗಳಂತೆ' ವರ್ತಿಸುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಟೀಕಿಸಿದ್ದಾರೆ. ಕೃಷಿಕರು ತಮ್ಮ ಫಸಲಿಗೆ ಅತಿ ಕಡಿಮೆ ಬೆಲೆ ಪಡೆಯುತ್ತಾರೆ. ಆದರೆ ಗ್ರಾಹಕರು ಅವುಗಳನ್ನು ಹೆಚ್ಚಿನ ಬೆಲೆಗೆ ಖರೀದಿಸಬೇಕಾಗುತ್ತದೆ. ಮಧ್ಯವರ್ತಿಗಳೇ ಇದಕ್ಕೆ ಕಾರಣ. ಪ್ರಸಕ್ತ ಕಾನೂನು ವಿರೋಧಿ ಚಳವಳಿ ಶೀಘ್ರವೇ ತನ್ನಿಂತಾನೇ ಕೊನೆಗೊಳ್ಳುತ್ತದೆ ಎಂದರು.

### ರಾಹುಲ್ 'ಕೃಷಿ ಯಾತ್ರೆ'

ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಮೂರೂ ಕೃಷಿ ಕಾನೂನುಗಳನ್ನು ರದ್ದು ಪಡಿಸಲಾಗುವುದು ಎಂದು ನಾಯಕ ರಾಹುಲ್ ಗಾಂಧಿ ಘೋಷಿಸಿದ್ದಾರೆ. ಪಂಜಾಬ್‌ನಲ್ಲಿ 'ಖೇತಿ ಬಚಾವೋ ಯಾತ್ರಾ' (ಕೃಷಿ ಉಳಿಸಿ ಯಾತ್ರೆ) ಅಂಗವಾಗಿ ಭಾನುವಾರ ನಡೆದ ಟ್ರ್ಯಾಕ್ಟರ್ ರ್‍ಯಾಲಿ ಉದ್ಘಾಟಿಸಿ ಅವರು ಮಾತನಾಡಿದರು. ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ), ಆಹಾರ ಧಾನ್ಯ ಖರೀದಿ ಮತ್ತು ಸಗಟು ಮಾರುಕಟ್ಟೆಗಳು ದೇಶದ '3 ಆಧಾರ ಸ್ತಂಭಗಳು. ಪ್ರಧಾನಿ ನರೇಂದ್ರ ಮೋದಿ ಈ ವ್ಯವಸ್ಥೆಯನ್ನು ನಾಶ ಮಾಡಲು ಹೊರಟಿದ್ದಾರೆ. ಹಾಗಾಗಲು ಕಾಂಗ್ರೆಸ್ ಬಿಡುವುದಿಲ್ಲ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಈ ಕರಾಳ ಕಾನೂನುಗಳ ಅಡ್ಡಿಯನ್ನು ನಿವಾರಿಸಲಾಗುವುದು. ಅದಾನಿ ಮತ್ತು ಅಂಬಾನಿ ಮೋದಿ ಸರ್ಕಾರವನ್ನು ನಿಯಂತ್ರಿಸುತ್ತಿದ್ದಾರೆ ಎಂದು ರಾಹುಲ್ ಆರೋಪಿಸಿದರು.